**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಚಳ್ಳಕೆರೆ.</u>**

**<u>ಸಿ.ಸಿ. ನಂ. 2422/2025</u>**

ಪ್ರಮಾಣ ವಚನ ಬೋಧಿಸಲಾಯಿತು.

| | | | |
|---|---|---|---|
| ಹೆಸರು | : | ಅಕ್ಬರ್ ಅಹಮ್ಮದ್ | ಸಿ.ಡಬ್ಲ್ಯೂ-05 |
| ತಂದೆಯ ಹೆಸರು | : | ಬಶೀರ್ ಸಾಬ್ | ಪಿ.ಡಬ್ಲ್ಯೂ-04 |
| ವಯಸ್ಸು | : | 25 ವರ್ಷ | |
| ಉದ್ಯೋಗ | : | ಟೈಲರ್ ಕೆಲಸ | |
| ವಾಸಸ್ಥಳ | : | ಬುಡ್ನಹಟ್ಟಿ ಗ್ರಾಮ | ದಿಃ 07-02-2026. |

**<u>ಮುಖ್ಯ ವಿಚಾರಣೆ: ಮಾನ್ಯ ಎ.ಪಿ.ಪಿ. ರವರಿಂದಃ</u>**

ಸಾಕ್ಷಿಗೆ ನಿಪಿ.7 ಅನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ.ಸಾಕ್ಷಿಯ ಸಹಿಯನ್ನು ನಿಪಿಃ 7(ಬಿ) ಅಂತ ಗುರುತಿಸಲಾಯಿತು.

ದಿನಾಂಕ 05.10.2025 ರಂದು ಪೊಲೀಸ್ ಠಾಣೆಯಲ್ಲಿ ನಿಪಿ.7 ಕ್ಕೆ ಸಹಿ ಮಾಡಿರುತ್ತೇನೆ. ನನ್ನ ಜೊತೆ ಚಾಸಾ-4 ರವರು ಹಾಜರಿದ್ದರು. ಪೊಲೀಸರು ನನ್ನ ಸಮಕ್ಷಮ ಆರೋಪಿಯ ವಶದಿಂದ ಸ್ಪ್ಲೆಂಡರ್ ಬೈಕನ್ನು ಜಪ್ತು ಪಡಿಸಿಕೊಂಡಿರುತ್ತಾರೆ. ಮದ್ಯಾಹ್ನ 01.15 ರಿಂದ 01.45 ರವರೆಗೆ ಮಹಜರ್ ಕ್ರಮ ಜರುಗಿಸಲಾಗಿರುತ್ತದೆ.

ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುಸಿರುತ್ತಾರೆ.

**<u>ಪಾಟೀ ಸವಾಲುಃ ಶ್ರೀ ಟಿ.ಎಸ್.ಎಂ.. ಆರೋಪಿ ಪರ ವಕೀಲರಿಂದಃ</u>**

ಜಪ್ತು ಪಡಿಸಿಕೊಂಡ ವಾಹನದ ಸಂಖ್ಯೆ ಹೇಳಲು ನೆನಪಿಲ್ಲ. ಮಹಜರ್ ಮಾಡಿದ ಸ್ಥಳದ ಚಕ್ಕುಬಂದಿ ಪಶ್ಚಿಮಕ್ಕೆ ಚಿತ್ರದುರ್ಗ ರಸ್ತೆ , ಪೂರ್ವಕ್ಕೆ ಪೊಲೀಸ್ ಠಾಣೆ, ಉತ್ತರಕ್ಕೆ ತಾಲ್ಲೂಕು ಕಚೇರಿ, ದಕ್ಷಿಣಕ್ಕೆ ಹೆಗ್ಗೆರೆ ತಾಯಮ್ಮ ಶಾಲೆ ಇರುತ್ತದೆ. ಸದರಿ ಚಕ್ಕುಬಂದಿಯಲ್ಲಿ ಮಹಜರ್ ಕ್ರಮ ಜರುಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ .7 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಿಪಿ.7 ಅನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ಸದರಿ ವಿಚಾರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ಹೇಳಿದ ಮೇರೆಗೆ ನಿಪಿ.7 ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಜಪ್ತು ಪಡಿಸಿಕೊಂಡ ವಾಹನವನ್ನು ಚಾಸಾ-45 ರವರು ಹಾಜರು ಪಡಿಸಿರುತ್ತಾರೆ. ಜಪ್ತು ಪಡಿಸಿಕೊಂಡ ವಾಹನವನ್ನು ಎಲ್ಲಿಂದ ತರಲಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಿಪಿ.7 ಅನ್ನು ವೆಂಕಟೇಶ್ ಪೊಲೀಸರು ಟೈಪ್ ಮಾಡಿರುತ್ತಾರೆ. ನಿಪಿ.7 ಅನ್ನು ಮಧ್ಯಾಹ್ನ ಟೈಪ್ ಮಾಡಿರುತ್ತಾರೆ. ನಿಪಿ.7 ಅನ್ನು ಓದಿ ತಿಳಿಸಿರುತ್ತಾರೆ. ಸದರಿ ವಿಚಾರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮಹಜರಿಗೆ ಹಾಜರಾಗಲು ಪೊಲೀಸರು ನನಗೆ ನೋಟೀಸ್ ನೀಡಿರುವುದಿಲ್ಲ. ನನ್ನ ಸಮಕ್ಷಮ ಯಾವುದೇ ಮಹಜರ್ ಕ್ರಮ ಜರುಗಿಸದೇ ಇದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿಯಿದೆ,

ಪಧಾನ ಸಿವಿಲ್ ಮತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ